ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)
K. YALAKKI GOWDA
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ.ಗ್ರಾಅಪ 47 ಜಿಪಸ 2013

ದಿನಾಂಕ: 16.12.2013

ಕಾಲಮಿತಿ

ಮಾನ್ಯರೆ,

ವಿಷಯ: "ಪಂಚಾಯತಿ ಸಶಕ್ತೀಕರಣ ಪುರಸ್ಕಾರ"ಕ್ಕೆ ಪ್ರಶ್ನಾವಳಿಗೆ ಸಂಬಂಧಿಸಿದಂತೆ ಮೂರು ಹಂತದ ಎಲ್ಲಾ ಪಂಚಾಯತ್ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು

******

"ಪಂಚಾಯತಿ ಸಶಕ್ತೀಕರಣ ಪುರಸ್ಕಾರ" (PEAIS ಪ್ರಶಸ್ತಿ)ಕ್ಕೆ ಸಂಬಂಧಿಸಿದಂತೆ ದಿನಾಂಕ 21.10.2013 ರಂದು ಈಗಾಗಲೇ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಪಟ್ಟ ಪ್ರಶ್ನಾವಳಿಗಳ Hard Copy ಗಳನ್ನು ತಮಗೆ ಪೂರ್ವಭಾವಿಯಾಗಿ ಮಾಹಿತಿಯನ್ನು ಕ್ರೋಢೀಕರಿಸಿ, ಇಟ್ಟುಕೊಳ್ಳಲು ತಿಳಿಸಲಾಗಿತ್ತು. ಈಗ ಪಂಚತಂತ್ರ ತಂತ್ರಾಂಶದಲ್ಲಿ ಪಂಚಾಯತಿ ರಾಜ್ ಸಂಸ್ಥೆಗಳಿಗೆ ಲಭ್ಯಗೊಳಿಸಲಾಗಿರುವ "ಪಂಚಾಯತಿ ಸಶಕ್ತೀಕರಣ ಪುರಸ್ಕಾರ (PEAIS ಪ್ರಶಸ್ತಿ)"ಕ್ಕೆ ಪ್ರಶ್ನಾವಳಿಗೆ ಸಂಬಂಧಿಸಿದಂತೆ ಮೂರು ಹಂತದ ಎಲ್ಲಾ ಪಂಚಾಯತ್ ಸಂಸ್ಥೆಗಳು ಕಡ್ಡಾಯವಾಗಿ ಈ ಕೆಳಕಂಡ ಅನುಸರಿಸಬೇಕಾದ ಕ್ರಮಗಳು:

1. "ಪಂಚಾಯತಿ ಸಶಕ್ತೀಕರಣ ಪುರಸ್ಕಾರ" (PEAIS ಪ್ರಶಸ್ತಿ)ಕ್ಕೆ ಅರ್ಹ ಮೂರು ಹಂತದ ಎಲ್ಲಾ ಪಂಚಾಯತ್ ಸಂಸ್ಥೆಗಳು ತಮಗೆ ನೀಡಿರುವ ಪ್ರಶ್ನಾವಳಿಗಳಿಗೆ <u>ಅನುಸಾರವಾಗಿ 1 ವಾರದೊಳಗೆ ಸರ್ಕಾರಕ್ಕೆ ಪ್ರಸ್ತಾವನೆಯ **Hard Copy** ಯನ್ನು ಸಲ್ಲಿಸುವುದು:</u> ಇದಕ್ಕೂ ಮೊದಲು ತಾವುಗಳು ಪ್ರಶ್ನಾವಳಿಗಳಿಗೆ ಮಾಹಿತಿಯನ್ನು ಸಂಗ್ರಹಿಸಿದ್ದರೆ ಕೂಡಲೇ ಫ್ಯಾಕ್ಸ್ ಮತ್ತು ಇಮೇಲ್ ಮೂಲಕ ಸರ್ಕಾರಕ್ಕೆ ಸಲ್ಲಿಸುವುದು. ಇದನ್ನೂ ತಾವು ಗಂಭೀರವಾಗಿ ಪರಿಗಣಿಸಿ, ವೈಯಕ್ತಿಕ ಗಮನಹರಿಸಿ ತುರ್ತು ಕ್ರಮವಹಿಸಲು ಕೋರಿದೆ.
2. ಪಂಚತಂತ್ರ ತಂತ್ರಾಂಶದಲ್ಲಿ ಪಂಚಾಯತಿ ರಾಜ್ ಸಂಸ್ಥೆಗಳಿಗೆ ಲಭ್ಯಗೊಳಿಸಲಾದ "ಪಂಚಾಯತಿ ಸಶಕ್ತೀಕರಣ ಪುರಸ್ಕಾರ (PEAIS ಪ್ರಶಸ್ತಿ)"ಕ್ಕೆ ಪ್ರಶ್ನಾವಳಿಗೆ ಸಂಬಂಧಿಸಿದಂತೆ ಮೂರು ಹಂತದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ಸಲ್ಲಿಸುವುದು.
3. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜಂಟಿಯಾಗಿ ಹೊಂದಿರುವವರು ತಮ್ಮ ಡಿಜಿಟಲ್ ಸಹಿಯೊಂದಿಗೆ ಅರ್ಜಿ ಸಲ್ಲಿಸುವುದು.
4. "ಪಂಚಾಯತಿ ಸಶಕ್ತೀಕರಣ ಪುರಸ್ಕಾರ" (PEAIS ಪ್ರಶಸ್ತಿ) ಪ್ರಶ್ನಾವಳಿಗಳ ಎದುರಾಗಿ ಮೂರು ಹಂತದ ಎಲ್ಲಾ ಪಂಚಾಯತ್ ಸಂಸ್ಥೆಗಳು ನಿಗಧಿತ ಕಾಲಮಿತಿಯಲ್ಲಿ ಆನ್‌ಲೈನ್ ಭರ್ತಿ ಮಾಡಲು ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿಗಳು ಜಿಲ್ಲೆಗಳಲ್ಲಿ ನೋಡಲ್ ಅಧಿಕಾರಿಯಾಗಿರುವರು.
5. 2013-14ನೇ ಸಾಲಿನ "ಪಂಚಾಯತಿ ಸಶಕ್ತೀಕರಣ ಪುರಸ್ಕಾರ" (PEAIS ಪ್ರಶಸ್ತಿ) ಯೋಜನೆಯನ್ನು ಕಾರ್ಯಾಚರಣೆಗೊಳಿಸಲು ಭಾರತ ಸರ್ಕಾರದ ಪಂಚಾಯತಿ ರಾಜ್ ಮಂತ್ರಾಲಯವು ನಿಗಧಿಪಡಿಸಿರುವ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಮಾರ್ಪಡಿಸಿದ್ದು ಅದರಂತೆ ಕ್ರಮವಹಿಸುವುದು-
   i) Indicators, Questionnaires and Marking Schemeಗಳನ್ನು ಅಂತಿಮಗೊಳಿಸಲಾಗಿದೆ.
   ii) Indicators, Questionnaires and Marking Scheme ಗಳ ಎದುರಾಗಿ ಮಾಹಿತಿಗಳನ್ನು ಸಲ್ಲಿಸುವ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಕಿರುಪಟ್ಟಿ (short list) ಯನ್ನು ತಯಾರಿಸುವುದು-18.12.2013
   iii) ಕಿರುಪಟ್ಟಿ ಮಾಡಲಾದ ಪಂಚಾಯತಿ ಸಂಸ್ಥೆಗಳನ್ನು SPPAC ಸಮಿತಿಯು ನಿರ್ಧರಿಸುವ ತಂಡದಿಂದ ಕ್ಷೇತ್ರ ತಪಾಸಣೆ ನಡೆಸುವುದು ದಿನಾಂಕ: 19.12.2013 ಮತ್ತು 20.12.2013
   iv) ಮೂರು ಹಂತದ ಎಲ್ಲಾ ಪಂಚಾಯತ್ ಸಂಸ್ಥೆಗಳನ್ನು short list ಮಾಡುವ ದಿನಾಂಕ21.12.2013 ರಿಂದ 23.12.2013ರವರೆಗೆ
   v) ಪ್ರಶಸ್ತಿಗಳನ್ನು ಪಡೆಯಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯಕ್ಕೆ ಸಲ್ಲಿಸಲು ಪಂಚಾಯತಿಗಳನ್ನು SPPAC ಸಮಿತಿಯು ಆಯ್ಕೆ ಮಾಡುವುದು-24.12.2013

ಆದರಗಳೊಡನೆ,

ತಮ್ಮ ವಿಶ್ವಾಸಿ,
16/12/13

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ